# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 901 |
| ಸದಸ್ಯರ ಹೆಸರು | ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 27.12.2022 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನಲ್ಲಿ ಸುಮಾರು 40 ಕ್ವಾರಿಗಳು, 160 ಗ್ರಾನೈಟ್ ಫ್ಯಾಕ್ಟರಿ / ಕಟ್ಟಿಂಗ್ ಕೇಂದ್ರುಗಳು ಕಾರ್ಯ ನಿರ್ವಹಿಸುತ್ತಿದೆಯೇ; | ಹೌದು. |
| ಆ) | ಸದರಿ ಸ್ಥಳದಲ್ಲಿ ಕಲ್ಲುಗಳನ್ನು ಬ್ಲಾಸ್ಟ್ ಮಾಡುವುದು ಮತ್ತು ಗ್ರಾನೈಟ್ ಕಟ್ಟಿಂಗ್‌ನಂತಹ ಗಣಿಗಾರಿಕೆ ಕೆಲಸಗಳು ನಡೆಯುತ್ತಿದ್ದು; ಇವುಗಳು ನಿಯಮಗಳನ್ನು ಪಾಲಿಸದಿರುವ ಪರಿಣಾಮ ಹಲವಾರು ಗ್ರಾಮಗಳಲ್ಲಿ ಗಣಿ ಧೂಳು ಹೆಚ್ಚಾಗಿ ರೈತರು ಬೆಳೆದಿರುವ ಬೆಳೆಗಳಿಗೆ ನಷ್ಟ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ತೈಲಗೆರೆ ಹಾಗೂ ಮುದ್ದನಾಯಕನ ಹಳ್ಳಿ ಗ್ರಾಮಗಳ ವ್ಯಾಪ್ತಿಯಲ್ಲಿ ನೀಡಲಾಗಿರುವ ಕಲ್ಲುಗಣಿ ಗುತ್ತಿಗೆ ಮತ್ತು ಸ್ಟೋನ್ ಕ್ರಷರ್ ಘಟಕಗಳಿಂದ ಹೊರಹೊಮ್ಮುವ ಧೂಳಿನಿಂದ ಕೃಷಿ ಭೂಮಿಗಳಿಗೆ ಆಗುತ್ತಿರುವ ನಷ್ಟಕ್ಕೆ ಸಂಬಂಧಿಸಿದಂತೆ ರೇಷ್ಮೆ ಇಲಾಖೆಯೊಂದಿಗೆ ಜಂಟಿ ಪರಿಶೀಲನೆ ಕೈಗೊಳ್ಳಲಾಗಿರುತ್ತದೆ.<br><br>ಕಲ್ಲುಗಣಿ ಗುತ್ತಿಗೆ ಮತ್ತು ಕ್ರಷರ್ ಘಟಕಗಳಿಂದ ಹೊರಹೊಮ್ಮುವ ಧೂಳು 06 ಹಳ್ಳಿಗಳಲ್ಲಿ 37 ರೇಷ್ಮೆ ಬೆಳೆಗಾರರ ಒಟ್ಟು 44.35 ಎಕರೆ ಹಿಪ್ಪುನೇರಳೆ ಪ್ರದೇಶಕ್ಕೆ ಆವರಿಸಿದ್ದು, ಇದರಿಂದ ಅಂದಾಜು ₹ 26,39,800/- ಗಳಷ್ಟು ಬೆಳೆ ನಷ್ಟ ಉಂಟಾಗಿರುತ್ತದೆ ಎಂಬುದಾಗಿ ರೇಷ್ಮೆ ಉಪ ನಿರ್ದೇಶಕರು, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ರವರು ದಿನಾಂಕ 23.11.2021 ರಂದು ವರದಿ ಸಲ್ಲಿಸಿರುತ್ತಾರೆ. |

....2

ಇ) ಬಂದಿದ್ದಲ್ಲಿ, ಗಣಿ ಧೂಳಿನಿಂದ ನಷ್ಟಕ್ಕೆ ಒಳಗಾಗಿರುವ ರೈತರಿಗೆ ನ್ಯಾಯ ಒದಗಿಸಲು ಮತ್ತು ಈ ಪ್ರದೇಶದಲ್ಲಿ ನಡೆಯುತ್ತಿರುವ ಅತಿಯಾದ ಗಣಿಗಾರಿಕೆಯನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿ ಮಂಜೂರು ಮಾಡಿರುವ ಕಲ್ಲುಗಣಿ ಗುತ್ತಿಗೆ ಮತ್ತು ಸ್ಟೋನ್ ಕ್ರಷರ್ ಘಟಕಗಳ ವಿವರ ಕೆಳಕಂಡಂತಿರುತ್ತದೆ.

| ಕ್ರ. ಸಂ. | ಕಲ್ಲುಗಣಿ / ಕ್ರಷರ್ ಗಳ ವಿವರ | ಒಟ್ಟು ಕಲ್ಲುಗಣಿ / ಕ್ರಷರ್ ಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಎ/ಗು) |
|---|---|---|---|
| 1 | ಅಲಂಕಾರಿಕ ಶಿಲೆ | 52 | 74-01 |
| 2 | ಕಟ್ಟಡ ಕಲ್ಲು | 22 | 66-04 |
| 3 | ಸ್ಟೋನ್ ಕ್ರಷರ್ ಘಟಕ | 16 | 40-38 |

ಕಳೆದ ಮೂರು ವರ್ಷಗಳಿಂದ ಮೇಲೆ ತಿಳಿಸಿರುವ ಕಲ್ಲುಗಣಿ ಗುತ್ತಿಗೆ ಮತ್ತು ಸ್ಟೋನ್ ಕ್ರಷರ್ ಘಟಕಗಳಿಂದ ಸರ್ಕಾರಕ್ಕೆ ಸಂದಾಯವಾದ ಆದಾಯದ ವಿವರ:

(₹ ಲಕ್ಷಗಳಲ್ಲಿ)

| ಕ್ರ. ಸಂ. | ವರ್ಷ | ರಾಜಧನ | ಡಿ.ಎಂ.ಎಫ್ |
|---|---|---|---|
| 1 | 2020-21 | 1242.0 | 37.19 |
| 2 | 2021-22 | 1406.0 | 34.78 |
| 3 | 2022-23 (ನವೆಂಬರ್ ಅಂತ್ಯಕ್ಕೆ) | 1263.0 | 23.98 |

- ದೇವನಹಳ್ಳಿ ತಾಲ್ಲೂಕು ಕೊಯಿರಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ದೊರೆಯುವ ಶಿಲೆಯು ಅನನ್ಯ (Unique) ಶಿಲೆಯಾಗಿದ್ದು, ಸದರಿ ಶಿಲೆಯು ವಿಧಾನಸೌಧ, ಸುವರ್ಣಸೌಧ ನಿರ್ಮಾಣದಲ್ಲಿ ಬಳಸಿರುವ ಶಿಲೆಯಾಗಿರುತ್ತದೆ. ಈ ಶಿಲೆಯು ದೇವಸ್ಥಾನಗಳನ್ನು ನಿರ್ಮಿಸಲು ಬಳಸಲಾಗುವ ಏಕೈಕ ಶಿಲೆಯಾಗಿರುತ್ತದೆ.
- ಈ ಭಾಗದಲ್ಲಿನ ಕಟ್ಟಡ ಕಲ್ಲುಗಣಿ ಗುತ್ತಿಗೆಗಳಿಂದ ತೆಗೆಯುವ ಉಪಖನಿಜವು ಬೆಂಗಳೂರು ನಗರ ಜಿಲ್ಲೆಯ ಸರ್ಕಾರಿ ಮತ್ತು ಗೃಹ ನಿರ್ಮಾಣ ಕಾಮಗಾರಿಗಳಿಗೆ ಬಳಕೆಯಾಗುತ್ತಿದ್ದು, ಮೇಲೆ ತಿಳಿಸಿರುವಂತೆ ಸರ್ಕಾರಕ್ಕೆ ರಾಜಸ್ವ ಸಂದಾಯವಾಗುತ್ತಿರುತ್ತದೆ.

| | | |
|---|---|---|
| | | • ಕಲ್ಲುಗಣಿ ಗುತ್ತಿಗೆ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ರಾಜ್ಯ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರದಿಂದ ಪರಿಸರ ಅನುಮತಿ ಪತ್ರ ಪಡೆದು ಸಲ್ಲಿಸುವುದನ್ನು ಕಡ್ಡಾಯಗೊಳಿಸಲಾಗಿದೆ.<br>• ಕಲ್ಲು ಗಣಿಗಾರಿಕೆಗೆ ರಾಜ್ಯ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರದಿಂದ ಜಾರಿ ಮಾಡುವ ಪರಿಸರ ಅನುಮತಿ ಪತ್ರದಲ್ಲಿ, ವಾರ್ಷಿಕವಾಗಿ ತೆಗೆಯುವ ಉಪಖನಿಜದ ಪ್ರಮಾಣದ ಮಿತಿಯನ್ನು ನಿಗದಿಪಡಿಸಲಾಗುತ್ತದೆ.<br>• ಕಳೆದ ಮೂರು ವರ್ಷಗಳ ಅಂಕಿ-ಅಂಶಗಳ ಪ್ರಕಾರ ದೇವನಹಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಲ್ಲು ಗಣಿ ಗುತ್ತಿಗೆ ಪ್ರದೇಶಗಳ ಗುತ್ತಿಗೆದಾರರು ಪರಿಸರ ಅನುಮತಿ ಪತ್ರದಲ್ಲಿ ಒಪ್ಪಿಗೆ ನೀಡಿರುವ ಉಪಖನಿಜ ಪ್ರಮಾಣದ ಮಿತಿಯೊಳಗೆ ಗಣಿಗಾರಿಕೆ ನಡೆಸಿ ಸಾಗಾಣಿಕೆ ಮಾಡಿರುವುದು ಕಂಡುಬಂದಿದೆ.<br>• ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ತೈಲಗೆರೆ ಮತ್ತು ಮುದ್ದನಾಯಕನಹಳ್ಳಿ ಗ್ರಾಮಗಳ ವ್ಯಾಪ್ತಿಯಲ್ಲಿನ ಕಲ್ಲು ಗಣಿ ಮತ್ತು ಸ್ಟೋನ್ ಕ್ರಷರ್ ಘಟಕದ ಪ್ರದೇಶಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪರಿಶೀಲಿಸಿ ದಿನಾಂಕ 02.03.2022 ರಂದು ಪರಿಶೀಲಿಸಿದ್ದು, ಕಲ್ಲು ಗಣಿ ಮತ್ತು ಸ್ಟೋನ್ ಕ್ರಷರ್ ಘಟಕಗಳಿಂದ ಉತ್ಪತ್ತಿಯಾಗುವ ಧೂಳಿನ ಪ್ರಮಾಣವು ಮಂಡಳಿಯು ಕಲ್ಲು ಕ್ರಷರ್ ಘಟಕಗಳಿಗೆ ನೀಡಿರುವ ಸಮ್ಮತಿ ಪತ್ರದಲ್ಲಿ ನಿಗದಿಪಡಿಸಿರುವ ಪ್ರಮಾಣದ ಪರಿಮಿತಿಯಲ್ಲಿರುತ್ತದೆ.<br>• ಸ್ಟೋನ್ ಕ್ರಷರ್ ಘಟಕಗಳು ಕರ್ನಾಟಕ ಜಲ್ಲಿ ಕ್ರಷರ್ ಗಳ ನಿಯಂತ್ರಣ ಅಧಿನಿಯಮ, 2011 ಹಾಗೂ ತಿದ್ದುಪಡಿ ಅಧಿನಿಯಮ, 2013ರ ಪ್ರಕರಣ 6 ರಲ್ಲಿ ನಿಗದಿಪಡಿಸಿರುವ ಮಾನಕಗಳಿಗೆ ಅನುಗುಣವಾಗಿ ಕಾರ್ಯಾಚರಣೆ ನಡೆಸುತ್ತಿರುತ್ತವೆ ಎಂದು ವರದಿ ನೀಡಿರುತ್ತಾರೆ.<br>• ನಿರ್ದೇಶಕರು, ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಕಚೇರಿಯ ವಿಜ್ಞಾನಿಗಳು ದಿನಾಂಕ 11.03.2022 ರಂದು ದೇವನಹಳ್ಳಿ ತಾಲ್ಲೂಕಿನ ವಿವಿಧ ಹಳ್ಳಿಗಳ ರೇಷ್ಮೆ ಕೃಷಿಕರಲ್ಲಿಗೆ ಕ್ಷೇತ್ರ ಪರಿವೀಕ್ಷಣೆ ಮಾಡಿ ದಿನಾಂಕ 19.03.2022 ರಂದು ಅಧ್ಯಯನ ವರದಿಯನ್ನು ಸಲ್ಲಿಸಿರುತ್ತಾರೆ. |

....4

| | | |
|---|---|---|
| | | • ಸದರಿ ವರದಿಯ ಶಿಫಾರಸ್ಸುಗಳಲ್ಲಿ, ಸ್ಟೋನ್ ಕ್ರಷರ್ ಘಟಕಗಳಲ್ಲಿ ಹೊರಹೊಮ್ಮುವ ಧೂಳಿನ ನಿಯಂತ್ರಣಕ್ಕೆ ಘಟಕದ ಸುತ್ತಲೂ ತಡೆಗೋಡೆ ನಿರ್ಮಿಸುವುದು ಹಾಗೂ ಧೂಳಿನ ಕಣಗಳು ಮೇಲೇಳದಂತೆ ನೀರನ್ನು ಸಿಂಪಡಿಸಬೇಕು ಎಂದು ತಿಳಿಸಿರುತ್ತಾರೆ.<br>• ಅದರಂತೆ, ಕಲ್ಲು ಗಣಿ ಗುತ್ತಿಗೆ / ಸ್ಟೋನ್ ಕ್ರಷರ್ ಘಟಕಗಳ ಮಾಲೀಕರು ಸದರಿ ಪ್ರದೇಶಗಳಿಂದ ಧೂಳು ಹೊರ ಹೋಗದಂತೆ ಹಾಗೂ ಜನ-ಜಾನುವಾರುಗಳಿಗೆ ತೊಂದರೆಯಾಗದಂತೆ ಕಲ್ಲು ಗಣಿ ಗುತ್ತಿಗೆ ಪ್ರದೇಶಗಳ ಸುತ್ತಲೂ ಪೂರ್ಣ ಪ್ರಮಾಣದಲ್ಲಿ ಜಂಕ್ ಶೀಟ್‌ಗಳಿಂದ ತಡೆಗೋಡೆಗಳನ್ನು ನಿರ್ಮಿಸಿ, ಸುತ್ತಲೂ ಗಿಡಗಳನ್ನು ಬೆಳೆಸಿ ಕ್ರಮ ಕೈಗೊಂಡಿರುತ್ತಾರೆ.<br>• ಜಲ್ಲಿ, ಎಂ-ಸ್ಯಾಂಡ್ ಸಾಗಾಣಿಕೆ ಮಾಡುವ ವಾಹನಗಳಿಗೆ ಟಾರ್ಪಲ್ ಹೊದಿಕೆ ಮಾಡಿ, ರಸ್ತೆಗಳಲ್ಲಿ ಟ್ಯಾಂಕರ್ ಮೂಲಕ ನೀರನ್ನು ಸಿಂಪಡಿಸಿ, ಧೂಳನ್ನು ನಿಯಂತ್ರಿಸಲು ಕ್ರಮ ಕೈಗೊಂಡಿರುತ್ತಾರೆ. |

ಸಂಖ್ಯೆ ಸಿಐ -ಎಂಎಂಎನ್/453/2022

**(ಆಚಾರ್ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು
ವಿಕಲಚೇತನರ, ಹಿರಿಯ ನಾಗರಿಕರ
ಸಬಲೀಕರಣ ಸಚಿವರು.